(ಆ) ಹಾಗಿದ್ದಲ್ಲಿ ಜಿಲ್ಲೆಗೆ ಹೊಸ ಕೈಗಾರಿಕೆ ಅಭಿವೃದ್ಧಿಗಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಇ) ಜಿಲ್ಲೆಯಲ್ಲಿ ಹಾಲಿ ಎಷ್ಟು ಕೈಗಾರಿಕೆಗಳಿವೆ ಹಾಗೂ ಎಷ್ಟು ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ?

ಶ್ರೀಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

(ಅ) 2009–14ರ ಕೈಗಾರಿಕಾ ನೀತಿಯಂತೆ ಚಾಮರಾಜನಗರ ತಾಲ್ಲೂಕನ್ನು ಅತ್ಯಂತ ಹಿಂದುಳಿದ ತಾಲ್ಲೂಕು ಎಂದು, ಗುಂಡ್ಲುಪೇಟೆ, ಕೊಳ್ಳೇಗಾಲ ತಾಲ್ಲೂಕುಗಳನ್ನು ಅತೀ ಹಿಂದುಳಿದ ತಾಲ್ಲೂಕುಗಳು ಎಂದು, ಯಳಂದೂರು ತಾಲ್ಲೂಕನ್ನು ಹಿಂದುಳಿದ ತಾಲ್ಲೂಕು ಎಂದು ಪರಿಗಣಿಸಲಾಗಿದೆ.

(ಆ) 2009–14ರ ಕೈಗಾರಿಕಾ ನೀತಿಯನ್ವಯ ಜಿಲ್ಲೆಯಲ್ಲಿ ಹೊಸ ಕೈಗಾರಿಕಾ ಸ್ಥಾಪಿಸುವವರಿಗೆ ವಿವಿಧ ಪ್ರೋತ್ಸಾಹ, ವಿನಾಯಿತಿ / ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ. ಇದಲ್ಲದೆ ಜಿಲ್ಲೆಯ ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕೈಗಾರಿಕಾ ಸ್ಥಾಪನೆಗೆ ಒಟ್ಟು 99 ನಿವೇಶನಗಳನ್ನು ಅಭಿವೃದ್ಧಿ ಪಡಿಸಲಾಗಿದ್ದು ಇವುಗಳನ್ನು ವಿವಿಧ ಕೈಗಾರಿಕೆಗಳನ್ನು ಹಂಚಿಕೆ ಮಾಡಲಾಗುತ್ತಿದೆ.

ಜಿಲ್ಲೆಯಲ್ಲಿ 8346 ಕೈಗಾರಿಕೆಗಳಿದ್ದು ಇದರಿಂದ ಸುಮಾರು 36113 ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದೆ.

ನೇಕಾರರ ಸಮಸ್ಯೆ

391(813) ಶ್ರೀ ನಂಜುಂಡ ಸ್ವಾಮಿ (ಕೊಳ್ಳೇಗಾಲ) ಮಾನ್ಯ ಜವಳಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಚಾಮರಾಜನಗರ ಜಿಲೆಯಲ್ಲಿಯ ನೇಕಾರರು ಅರ್ಥಿಕವಾಗಿ ತುಂಬಾ ಹಿಂದುಳಿದಿದ್ದು ಬೇರೆ ಕೆಲಸಗಳು ಗೊತ್ತಿಲ್ಲದೆ ಜೀವನ ಸಾಗಿಸುವುದು ಕಷ್ಟವಾಗಿರುತ್ತದೆ; ಇವರುಗಳಿಗೆ ಪೂರ್ಣ ಉದ್ಯೋಗ/ವಿದ್ಯುತ್ ಪೂರೈಕೆ/ನೇಯ್ದ ಬಟ್ಟೆಗಳಿಗೆ ಪೂರಕ ಬೆಲೆ ನಿಗದಿಯಾಗುತ್ತಿಲ್ಲ. ಈ ಬಗ್ಗೆ ನೇಕಾರರ ಸಮಸ್ಯೆಗಳಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಆ) ಚಾಮರಾಜನಗರ ಜಿಲ್ಲೆಯಲ್ಲಿ ಜವಳಿ ಪಾರ್ಕ್ ನಿರ್ಮಿಸಲು ಸರ್ಕಾರ ಆಲೋಚಿಸಿದೆಯೇ; ಇದರ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಆರ್. ವರ್ತೂರು ಪ್ರಕಾಶ್(ಜವಳಿ ಸಚಿವರು)

(ಅ) ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 800 ಕೈಮಗ್ಗಗಳು ಇದ್ದು ಇವುಗಳಲ್ಲಿ ರೇಷ್ಮೆ ಕಾಟನ್ ಸೀರೆಗಳು, ಕಾರ್ಪೆಟ್‌ಗಳು, ಉಣ್ಣೆ ಕಂಬಳಿ, ಇತ್ಯಾದಿಗಳನ್ನು ಉತ್ಪಾದನೆ ಮಾಡುತ್ತಿದ್ದಾರೆ ಹಾಗೂ 25 ವಿದ್ಯುತ್ ಮಗ್ಗಗಳು ಕಾರ್ಯ ನಿರ್ವಹಿಸುತ್ತಿದ್ದು ಇವುಗಳಲ್ಲಿ ಪಾಲಿಕಾಟನ್ ಸೀರೆಗಳು ಹಾಗೂ ಸಿಲ್ಕ್ ರಫ್ತು ಆಧಾರಿತ ಪರ್ನಿಷಿಂಗ್ ಬಟ್ಟೆಗಳನ್ನು ತಯಾರಿಸುತ್ತಿದ್ದಾರೆ ಹಾಗೂ ಜಿಲ್ಲೆಯಲ್ಲಿ 9 ಕೈಮಗ್ಗ, 1 ವಿದ್ಯುತ್ ಮಗ್ಗ ಸಹಕಾರ ಸಂಘ ಹಾಗೂ ಕೊಳ್ಳೇಗಾಲದಲ್ಲಿ ಕೆ.ಹೆ.ಡಿ.ಸಿ ಉಪ-ಕೇಂದ್ರವು ಹಾಗೂ 1 ಜವಳಿ ಗಿರಣಿ ಕಾರ್ಯನಿರತವಾಗಿರುತ್ತದೆ.

ಜಿಲ್ಲೆಯಲ್ಲಿ 162 ರೇಷ್ಮೆ ಹುರಿ ಘಟಕಗಳಿಗೆ ರಾಜ್ಯ ಸರ್ಕಾರದಿಂದ 1 ಯೂನಿಟ್‌ಗೆ ರೂ. 1.25ರಂತೆ ವಿದ್ಯುಚ್ಛಕ್ತಿ ರಿಯಾಯಿತಿ ನೀಡಲಾಗುತ್ತಿದೆ. ಸಾಮಾಜಿಕ ಭದ್ರತೆಗಾಗಿ ಮಹಾತ್ಮಗಾಂಧಿ ಬುನ್ಕರ್ ಭೀಮಾ ಯೋಜನೆಯಡಿ ಜಿಲ್ಲೆಯ 530 ಕೈಮಗ್ಗ ನೇಕಾರರನ್ನು 400 ವಿದ್ಯುತ್ ಮಗ್ಗ ನೇಕಾರರು ಹಾಗೂ ರೇಷ್ಮೆ ಹುರಿಕಾರರನ್ನು ವಿಮಾ ಯೋಜನೆಗೆ ಅಳವಡಿಸಲಾಗಿದೆ. 1009 ಕೈಮಗ್ಗ ನೇಕಾರರನ್ನು ಆರೋಗ್ಯ ವಿಮಾ ಯೋಜನೆಯಡಿ ಅಳವಡಿಸಲಾಗಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಉಪಯೋಜನೆ, ವಸತಿ ರಹಿತ ನೇಕಾರರಿಗೆ ರೂ. 65,000/- ಘಟಕ ವೆಚ್ಚದಲ್ಲಿ ವಸತಿ ಕಾರ್ಯಗಾರ ನಿರ್ಮಿಸುವುದು, ಮಗ್ಗರಹಿತ ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗ ನೀಡಲು ಶೇ. 50 ರಷ್ಟು ಸಹಾಯಧನ ಗರಿಷ್ಠ ರೂ. 1.00 ಲಕ್ಷ. ಜಿಲ್ಲೆಯಲ್ಲಿ ಕೈಮಗ್ಗ ನೇಕಾರರು ಕೆ.ಹೆಚ್.ಡಿ.ಸಿ, ಕೈಮಗ್ಗ ಸಹಕಾರ ಸಂಘ ಹಾಗೂ ಮಸ್ಟರ್ ವೀವರ್‌ಗಳ ಅಧೀನದಲ್ಲಿ ನೇಕಾರಿಕೆ ವೃತ್ತಿ ಮಾಡುತ್ತಿದ್ದು, ಕೆ.ಹೆಚ್.ಡಿ.ಸಿ ಉಪಕೇಂದ್ರ ಕೊಳ್ಳೇಗಾಲಕ್ಕೆ ಸಂಬಂಧಿಸಿದಂತೆ ಈ ಕೇಂದ್ರದಲ್ಲಿ ಪ್ಯೂರ್ ಸಿಲ್ಕ್ ಸೀರೆ, ಜರಿ ಬಾರ್ಡರ್ ಸೀರೆ, ಪ್ಲೈನ್ ಸೀರೆ ಹಾಗೂ ಡ್ಯೂಪಿಯನ್ ಶರ್ಟಿಂಗ್ ಬಟ್ಟೆಗಳನ್ನು ನೇಯ್ಗೆ ಮಾಡುತ್ತಿದ್ದು ನಿಗಮವು ಆಗಿಂದಾಗ್ಗೆ ಕೂಲಿ ಪರಿಷ್ಕರಣೆ ಹಾಗೂ ಬಟ್ಟೆಗಳ ಪೂರಕ ಬೆಲೆಯನ್ನು ಆಗಿದಾಂಗ್ಗೆ ನಿಗದಿಪಡಿಸಿ ಮಾರಾಟ ಮಾಡುತ್ತಿದ್ದಾರೆ.

ಅದೇ ರೀತಿ ಕೈಮಗ್ಗ ನೇಕಾರ ಸಹಕಾರ ಸಂಘಗಳ ಜಿಲ್ಲೆಯಲ್ಲಿ ಆಗಿಂದಾಗ್ಗೆ ನೇಯ್ಗೆ ಕೂಲಿ ಪರಿಷ್ಕರಣೆ ಮಾಡಿ ಬಟ್ಟೆಗಳಿಗೆ ನಿಗದಿತ ಬೆಲೆ ಕಾರ್ಯಕಾರಿ ಮಂಡಳಿಯಲ್ಲಿ ನಿಗದಿಪಡಿಸಿ ಮಾರಾಟ ಮಾಡುತ್ತಿದ್ದಾರೆ.

ಮಾಸ್ಟರ್ ವೀವರ್‌ಗಳ ಅಧೀನದಲ್ಲಿ ನೇಯ್ಗೆ ಕೆಲಸ ಮಾಡುವವರಿಗೆ ಸದರಿ ಮಾಲೀಕರು ಕಚ್ಚಾ ಮಾಲು ಇತ್ಯಾದಿಗಳನ್ನು ಪೂರೈಸಿ ಸೂಕ್ತವಾದ ನೇಯ್ಗೆ ಕೂಲಿಯನ್ನು ನೀಡಿ ನೇಯ್ಗೆ ಮಾಡಿದ ಬಟ್ಟೆಗಳನ್ನು ಮಾಲೀಕರೆ ಪಡೆದು ಮಾರಾಟ ಮಾಡುತ್ತಿದ್ದಾರೆ.

ಪ್ರತಿ ನೇಕಾರರು ಮಾಹೆಯಾನ ರೂ. 6000 ರಿಂದ 8000 ಮಜೂರಿಯನ್ನು ಪಡೆಯುತ್ತಿದ್ದು ಆರ್ಥಿಕವಾಗಿ ಸದೃಢರಾಗಿದ್ದಾರೆ.

ಕೈಮಗ್ಗ ನೇಕರರು ಬಟ್ಟೆಗಳಿಗೆ ಶೇಕಡ 20 ರಾಜ್ಯ ಸರ್ಕಾರದ ರಿಬೇಟ್‌ನ್ನು ನೀಡಿ ಮಾರುಕಟ್ಟೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ.

ಕೈಮಗ್ಗ ನೇಕಾರರ ಬಟ್ಟೆಗಳ ಮಾರುಕಟ್ಟೆಗಾಗಿ ಜಿಲ್ಲಾ ಮಟ್ಟದ ಕೈಮಗ್ಗ ಮೇಳಗಳನ್ನು ನಡೆಸಲಾಗುತ್ತಿದೆ. ಚಾಮರಾಜನಗರದ ಕೊಳ್ಳೇಗಾಲದಲ್ಲಿ ಕೈಮಗ್ಗ ನೇಕರರ ಅನುಕೂಲಕ್ಕಾಗಿ ಕೇಂದ್ರ ಸರ್ಕಾರದ ಸಹಯೋಗದಲ್ಲಿ ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆಯಡಿ ಕೈಮಗ್ಗ ಕ್ಲಸ್ಟರ್‌ನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

(ಆ) ಈ ರೀತಿ ಯಾವುದೇ ಪ್ರಸ್ತಾವನೆಗಳು ಸರ್ಕಾರದ ಮುಂದೆ ಇರುವುದಿಲ್ಲ.

ಆನೆ ಹಾವಳಿಯಿಂದ ರೈತರ ಬೆಳೆನಾಶ

392(814) ಶ್ರೀ ನಂಜುಂಡ ಸ್ವಾಮಿ ಜಿ.ಎನ್ (ಕೊಳ್ಳೇಗಾಲ) ಮಾನ್ಯ ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಚಾಮರಾಜನಗರ ಜಿಲ್ಲೆಯಾದ್ಯಂತ ಅರಣ್ಯ ಮತ್ತು ಸಸ್ಯ ಅಭಿವೃದ್ಧಿಯಲ್ಲಿ ಉದ್ಯೋಗ ಖಾತ್ರಿ ಮೂಲಕ ಎಷ್ಟು ಹಣ ಖರ್ಚಾಗಿದೆ;

(ಆ) ಚಾಮರಾಜನಗರ ಜಿಲ್ಲೆಯಲ್ಲಿ ಆನೆ ಹಾವಳಿ ಜಾಸ್ತಿಯಾಗಿದ್ದು, ರೈತರು ಬೆಳೆದ ಬೆಳೆಗಳು ನಾಶವಾಗುತ್ತಿದ್ದು, ಆನೆ ಹಾವಳಿ ನಿಯಂತ್ರಿಸಲು ಹೆಚ್ಚುವರಿ ಸಿಬ್ಬಂದಿ ನೇಮಕಾತಿ ಅವಶ್ಯಕತೆ ಇದೆ, ಮತ್ತು ಆನೆ ಹಾವಳಿಯಿಂದ ನಾಶವಾದ ಬೆಳೆಗೆ ಸರ್ಕಾರದಿಂದ ರೈತರಿಗೆ ತಕ್ಷಣ ಪರಿಹಾರ ಸಿಗುತಿಲ್ಲ. ಮತ್ತು ಅನೆ ತುಳಿತಕ್ಕೆ ಸಿಕ್ಕಿ ಸತ್ತವರ ಕುಟುಂಬಕ್ಕೆ ತಕ್ಷಣ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ?

(ಇ) ಚಾಮರಾಜನಗರ ಜಿಲ್ಲೆಯಲ್ಲಿ ಎಷ್ಟು ಸಾಮಾಜಿಕ ಅರಣ್ಯ ಪ್ರದೇಶವಿದೆ; ಹುಲಿ ಸಂರಕ್ಷಿತ ಪ್ರದೇಶವೆಷ್ಟು; ಕೇಂದ್ರ /ರಾಜ್ಯ ಸರ್ಕಾರದ ಅನುದಾನದಿಂದ ಕೈಗೊಂಡ ಕ್ರಮಗಳೇನು?